**OS.No.263/2015**
**PW-1**

ದಿನಾಂಕ 04-10-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್ ವಿ ಡಬ್ಲೂ ವಕೀಲರಿಂದಃ</u>**

1. ನಾನು ದಾವಾದ ಆಸ್ತಿಯನ್ನು ಹೆಗ್ಗಪ್ಪ ಮಕರವಳ್ಳಿ ಎಂಬುವರಿಂದ ಖರೀದಿಸಿರುತ್ತೇನೆ. 1 ನೇ ಪ್ರತಿವಾದಿಯೂ ಸಹ ಮರಿಯಪ್ಪ ಮಕರವಳ್ಳಿಯವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ಸದರಿ ಮರಿಯಪ್ಪ ಹೆಗ್ಗಪ್ಪ ಮಕರವಳ್ಳಿ ಅವರ ತಮ್ಮ. ಸರ್ವೆ ನಂ. 10 ರ ಜಮೀನನ್ನು ಹೆಗ್ಗಪ್ಪ ಮತ್ತು ಮರಿಯಪ್ಪ ಅವರು ಹಿಸ್ಸೆ ಮಾಡಿಕೊಂಡಿದ್ದರು. ಸದರಿಯವರು ವಿಭಾಗ ಆಗುವ ಕಾಲದಲ್ಲಿ ತಮಗೆ ಬಂದ ಹಿಸ್ಸೆಯ ಜಮೀನುಗಳಿಗೆ ಅಳತೆಯ ಕಲ್ಲುಗಳನ್ನು ಮಾಡಿಕೊಂಡಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ.

2. ಸರ್ವೆ ನಂ. 10/4 ರ ಜಮೀನನ್ನು ನನಗೆ ಸೇರಿದ ಮಾಲ್ಕೀ ಜಮೀನು ಅಲ್ಲ ಎಂದು ತಕರಾರು ಮಾಡಿರುವುದಿಲ್ಲ. ಪ್ರತಿವಾದಿಯರು ನಮಗೆ ತಿಳಿಯದ ಹಾಗೆ ಜಮೀನುಗಳನ್ನು ಪೋಡಿ ಮಾಡಿಸಿದ್ದು ಆ ಸಮಯದಲ್ಲಿ ಅಳತೆ ಮಾಡಲು ಅಧಿಕಾರಿಗಳು ಬಂದಾಗ ನಾವು ತಕರಾರು ಮಾಡಿದ್ದು ಅದರಂತೆ ನಾನು ಈ ದಾವೆ ಸಲ್ಲಿಸಿದ್ದೇನೆ. ನಾನು ತಕರಾರು ಮಾಡಿದ್ದರಿಂದ ಒಟ್ಟು ಸರ್ವೆ ನಂ, 10 ರ ಜಮೀನನ್ನು ಅಳತೆ ಮಾಡಿರುವುದಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ನಾನು ವಹಿವಾಟು ಮಾಡಲು ತಕರಾರು ಮಾಡಿದ್ದಾರಾ ಎಂಬ ಸೂಚನೆಗೆ ಸಾಕ್ಷಿಯು ಅವರು ನನ್ನ ಜಮೀನಿನಲ್ಲಿ ಅವರು ಸೇರಿದ ಆಸ್ತಿ ಇದೆ ಎಂದು ಹೇಳಿ ತೊಂದರೆ ನೀಡಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

3. ನಾನು ದಾವಾ ಆಸ್ತಿಯನ್ನು ಅಳತೆ ಮಾಡಿಸಿದ ನಂತರವೇ ಖರೀದಿಗೆ ತೆಗೆದುಕೊಂಡಿರುತ್ತೇನೆ. ನಾನು ದಾವಾ ಆಸ್ತಿಯನ್ನು ಅಳತೆ ಮಾಡಿಸುವ ಕಾಲಕ್ಕೆ ಖರೀದಿ ಪತ್ರ ಆಗಿರುವುದಿಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಿಸಲು ಅದರ ಮೂಲ

ಮಾಲೀಕರಾದ ಹೆಗ್ಗಪ್ಪ ಅವರೇ ಅರ್ಜಿ ಸಲ್ಲಿಸಿರುತ್ತಾರೆ. ಅಳತೆಗಾಗಿ ಅರ್ಜಿಯನ್ನು ಹೆಗ್ಗಪ್ಪ ಅವರು 2000 ನೇ ಇಸವಿಯಲ್ಲಿ ನೀಡಿರುತ್ತಾರೆ. ಅದರ ಪ್ರತಿಯನ್ನು ಮತ್ತು ಅಳತೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 01 ಎಕರೆ 27 ಗುಂಟೆ ಸಂಪೂರ್ಣ ಕ್ಷೇತ್ರಕ್ಕೆ ನಾನು ವಹಿವಾಟು ಮಾಡಲು ಪ್ರತಿವಾದಿಗಳು ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತೆಂಗಿನ ಮರಗಳು ನನ್ನ ಮತ್ತು ಪ್ರತಿವಾದಿಯರ ಜಮೀನುಗಳನ್ನು ಬೇರ್ಪಡಿಸಲು ಮಧ್ಯ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ತೆಂಗಿನ ಮರಗಳು ನನ್ನ ಜಮೀನಿನ ಪೂರ್ವ ಭಾಗದಲ್ಲಿ ಒಳಗಡೆ ಇರುತ್ತವೆ ಎಂದು ನುಡಿಯುತ್ತಾರೆ.

4. ಸರ್ವೆ ಅಧಿಕಾರಿಗಳು ತಮ್ಮ ಅಳತೆಯ ವರದಿಯಲ್ಲಿ ತೆಂಗಿನ ಮರಗಳು ನನ್ನ ಸ್ವಾಧೀನಕ್ಕೆ ಒಪಳಪಟ್ಟ ದಾವಾ ಆಸ್ತಿಯಲ್ಲಿ ಬರುತ್ತವೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅಳತೆಯ ಸಂದಂರ್ಭದಲ್ಲಿ ತೆಂಗಿನ ಗಿಡಗಳನ್ನು ಹಚ್ಚಿರುವುದಿಲ್ಲ, ಅತಳೆಯ ನಂತರ ನಾನು ದಾವಾ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡ ನಂತರ ತೆಂಗಿನ ಗಿಡಗಳನ್ನು ಬೆಳೆಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಮತ್ತು ಪ್ರತಿವಾದಿಯರ ಜಮೀನುಗಳನ್ನು ಮತ್ತೊಮ್ಮೆ ಅಳತೆ ಮಾಡಿಸಲು ತಕರಾರು ಇದೆಯಾ ಎಂದರೆ ಈಗಾಗಲೇ ಅಳತೆ ಮಾಡಿಸಿದ್ದರಿಂದ ಮತ್ತೊಮ್ಮೆ ಅಳತೆ ಮಾಡಿಸುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅಳತೆ ಮಾಡಿಸಿದರೆ ತೆಂಗಿನ ಮರಗಳು ಯಾರ ಜಮೀನಿನಲ್ಲಿ ಇವೆ ಎಂದು ಸತ್ಯಾಂಶ ಹೊರ ಬರುತ್ತದೆ ಎಂದು ನಾನು ಮತ್ತೊಮ್ಮೆ ಅಳೆ ಮಾಡಿಸಲು ತಯಾರು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ-12 ರ ಪಿಟಿಶೀಟ್ ದಾಖಲೆಯು ಕೇವಲ ಸರ್ವೆ ನಂ. 10 ರಲ್ಲಿ ಇರುವ ಪೋಡಿ ಜಮೀನುಗಳಿಗೆ ಸಂಬಂಧಿಸಿದಂತೆ ಇದ್ದು ಅದರಲ್ಲಿ ಸಂಪೂರ್ಣವಾಗಿ ಸರ್ವೆ ನಂ, 10 ರಲ್ಲಿರುವ ಎಲ್ಲ ಪೋಡಿ ಆಸ್ತಿಗಳ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ. 10 ರಲ್ಲಿರುವ ಎಲ್ಲ ಪೋಡಿ

ಜಮೀನುಗಳನ್ನು ಅಳತೆ ಮಾಡಿಸಿದರೆ ಯಾವ ಯಾವ ಸ್ವಾಧೀನದಾರರು ಹೊತ್ತುವರಿ ಮಾಡುತ್ತಿದ್ದರು ಎಂದು ತಿಳಿದು ಬರುತ್ತದೆ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯ ನನ್ನ ಮಾಲೀಕತ್ವ ಮತ್ತು ಸ್ವಾಧೀನವನ್ನು ಅಲ್ಲಗಳೆದಿರುವುದಿಲ್ಲ ಮತ್ತು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ